ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸಂಜೆ 5 ಗಂಟೆ 45 ನಿಮಿಷವಾಗಿದೆ.

ಉಪಾಧ್ಯಕ್ಷರು :- ಆಗಲಿ. ಪರವಾಗಿಲ್ಲ ತಾವು ಚರ್ಚೆಯನ್ನು ಮುಂದುವರೆಸಿ.

ಶ್ರೀ ಟಿ.ಬಿ. ಜಯಚಂದ್ರ :- ಸದರಿ ವಿಷಯವನ್ನು ಬೆಳಿಗ್ಗೆ ಪ್ರಾರಂಭ ಮಾಡೋಣ. ಈಗ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು :- ತಾವು ನಿನ್ನೆ ದಿವಸ ರಾಜ್ಯಪಾಲರ ಭಾಷಣದ ಬಗ್ಗೆ ಅರ್ಧ ಚರ್ಚೆ ಮಾಡಿದ್ದೀರಿ. ಈಗ ತಾವು ಪ್ರಾರಂಭ ಮಾಡಿ ಅದನ್ನಾದರೂ ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಮಾನ್ಯ ರುದ್ರೇಶ್‌ಗೌಡರು ಮಾತನಾಡುತ್ತಾರೆ.

ಉಪಾಧ್ಯಕ್ಷರು :- ಆನಂತರ ಎಲ್ಲರಿಗೂ ಅವಕಾಶ ಕೊಡುತ್ತೇನೆ. ತಾವು ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ರುದ್ರೇಶ್‌ಗೌಡರು ಈಗ ಪ್ರಾರಂಭ ಮಾಡುತ್ತಾರೆ.

ಉಪಾಧ್ಯಕ್ಷರು :- ಮಾನ್ಯ ರುದ್ರೇಶ್‌ಗೌಡರೇ, ತಾವೇ ಪ್ರಾರಂಭ ಮಾಡಿ.

9. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವರದಿಯ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದು) :

ಶ್ರೀ ವೈ.ಎನ್. ರುದ್ರೇಶ್‌ಗೌಡ (ಬೇಲೂರು): ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಮೊನ್ನೆ ನಮಗೆ ಕರ್ನಾಟಕ ರಾಜ್ಯದ ರಾಜ್ಯಪಾಲರು ವರದಿಯನ್ನು ಈ ವಿಧಾನ ಸಭಾ ಹೌಸ್‌ನಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಕೆಲವೊಂದು ವಿಚಾರಗಳನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ವರದಿಯಲ್ಲಿ ಶಕ್ತಿಶಾಲಿ ಮತ್ತು ಸಮೃದ್ಧಿ ಕರ್ನಾಟಕ ನಿರ್ಮಾಣ ಮಾಡಲು ಅಭಿವೃದ್ಧಿಪರವಾದಂಥ ಸ್ಪಂದನಾಶೀಲ ಆಡಳಿತ ನೀಡುವ ಬಗ್ಗೆ ಹೇಳಿದ್ದಾರೆ. ಈ ಸಮಾರಂಭದಲ್ಲಿ ನಾನು ಹೇಳುವುದು ಇಷ್ಟೆ. ಸಮೃದ್ಧಿಯಾದಂಥ ಕರ್ನಾಟಕ ನಿರ್ಮಾಣ ಮಾಡುವುದು ಎಂದು ಹೇಳಿ ಸಭಾಧ್ಯಕ್ಷರೆ, ಆ ಸಮಯದಲ್ಲಿ ನನ್ನ ಕ್ಷೇತ್ರವಾದ ಬೇಲೂರಿನಲ್ಲಿ ಸುಮಾರು 350 ಕಿ.ಮೀ.P.W.D ರಸ್ತೆ ಇದೆ. ಆದರೆ,

2008-09ನೇ ಸಾಲಿನಲ್ಲಿ ಒಂದು ಕಿ.ಮೀ. ರಸ್ತೆಗೆ recoatಅನ್ನು ಕೊಟ್ಟಿಲ್ಲ, CRFನಲ್ಲಿ ಸೇರಿಲ್ಲ, 5054ರಲ್ಲಿ ಸೇರಿಲ್ಲ, 3054ರಲ್ಲಿ ಸೇರಿಲ್ಲ, ನಂಜುಡಪ್ಪ ವರದಿ ಇಲ್ಲ, ಯಾವ ಒಂದು ಕಾಮಗಾರಿಗಳು ನಡೆದಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, 340 ಕಿ.ಮೀ.ನಷ್ಟು ಈ ಒಂದು ತಾಲ್ಲೂಕಿನಲ್ಲಿ PWD ರಸ್ತೆ ಇರಬೇಕಾದರೆ, ಒಂದು ವರ್ಷಕ್ಕೆ ಕನಿಷ್ಟ 20 ಕಿ.ಮೀ. recoat ಮಾಡಲಿಲ್ಲ ಅಂದರೆ ಹೇಗೆ? ಇದು ಯಾವ ನ್ಯಾಯ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ದಯವಿಟ್ಟು ಈಗಲಾದರೂ ಇದರ ಬಗ್ಗೆ ಹೇಳಿ. ಹೀಗೆ ಕೂತರೆ ಏನಾಗುತ್ತೆ ಎಂದರೆ, ಕ್ಷೇತ್ರದ ಜನರಿಗೆ ನಾವು ವಂಚನೆ ಮಾಡಿದ ಹಾಗೆ ಆಗುತ್ತದೆ. ಇದರಲ್ಲಿ ಎರಡು ಮಾತಿಲ್ಲ. ಕಾರಣವೇನೆಂದರೆ, ಬೇಲೂರು ತಾಲ್ಲೂಕು, ಮಲೆನಾಡಿನ ಪ್ರದೇಶದಲ್ಲಿ ಪ್ರತಿ ವರ್ಷವೂ ಸಹ ರಸ್ತೆಗಳಲ್ಲಿ ಗುಂಡಿಗಳು ಬೀಳುತ್ತಿವೆ. ನಾನು ಹೇಳುವುದೇನೆಂದರೆ, ಈ ಬಾರಿ ಸನ್ಮಾನ್ಯ ಲೋಕೋಪಯೋಗಿ ಸಚಿವರು ಕನಿಷ್ಟ 25 ಕಿ.ಮೀ.ನಷ್ಟಾದರೂ recoat ಅನ್ನು ನಮಗೆ ಮಾಡಿಕೊಟ್ಟರೆ ಸ್ವಲ್ಪಮಟ್ಟಿಗಾದರೂ ತಾಲ್ಲೂಕಿನಲ್ಲಿ ಕೆಲಸ ಮಾಡಿದ್ದೇವೆ ಎಂದು ಜನ ಹೇಳುತ್ತಾರೆ. ಇಲ್ಲದಿದ್ದರೆ, ಜನಗಳು ರುದ್ರೇಶ್‌ಗೌಡರು ಏನು ಕೆಲಸ ಮಾಡಲಿಲ್ಲ ಎಂದು ಹೇಳುತ್ತಾರೆ. ಹೊಸದಾಗಿ ನಾನು ಶಾಸಕನಾಗಿ ಆಯ್ಕೆಯಾಗಿದ್ದೇನೆ. ಆದ್ದರಿಂದ, ನೀವು ಈ ಕೆಲಸವನ್ನು ಮಾಡಿಕೊಡಬೇಕು. ಇಲ್ಲದಿದ್ದರೆ, ಕೆಲಸ ಮಾಡುವಂತಹ ಶಕ್ತಿ ಶಾಸಕರಿಗೆ ಇಲ್ಲ ಎಂದು ಜನಗಳು ಅಭಿಪ್ರಾಯ ಪಡುತ್ತಾರೆ. ಈ ದಿನ ನಾನು ಧರಣಿಗೆ ಕೂತುಕೊಳ್ಳಬೇಕು ಎಂದು ನಿಶ್ಚಯ ಮಾಡಿದ್ದೇನೆ.

ನನಗೆ ಈ ಸಾಲಿನಲ್ಲಿ ಕನಿಷ್ಟ 25 ಕಿ,ಮೀ ಆದರೂ re-coat ನ್ನು ನಮಗೆ ಕೊಟ್ಟರೆ ಸ್ವಲ್ಪಮಟ್ಟಿಗೆ ನಾವು ತಾಲ್ಲುಕಿನಲ್ಲಿ ಕೆಲಸ ಮಾಡಿದ್ದೇವೆಂದು ಜನಗಳಿಗೆ ಕಾಣಿಸುತ್ತದೆ. ಇಲ್ಲದಿದ್ದರೆ ಜನರು ಏನು ಹೇಳುತ್ತಾರೆಂದರೆ ರುದ್ರೇಶ್ ಗೌಡರು ಏನು ಕೆಲಸ ಮಾಡುತ್ತಿಲ್ಲ. ಹೊಸದಾಗಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಸಾಲಿನಲ್ಲಿ ಕೆಲಸ ಮಾಡುವಂತಹ ಶಕ್ತಿ ಶಾಸಕರಲಿಲ್ಲವೆಂದು ಜನರಲ್ಲಿ ಅಭಿಪ್ರಾಯ ಬರುತ್ತದೆ. ಇದರ ಬಗ್ಗೆ ಇಲ್ಲಿ ಈ ದಿನ ಧರಣಿ ಕೂರಬೇಕೆಂದು ನಿಶ್ಚಯವನ್ನು ನಾನು ಮಾಡಿದ್ದೇನೆ. ಸನ್ಮಾನ್ಯ ಮಂತ್ರಿಗಳು ಇದ್ದಾರೆ ಅವರು ಇಲ್ಲಿ ಹೇಳಿಕೆಯನ್ನು ಹೇಳಬೇಕು. ನಾನು ಹಲವಾರು ಸಲ ಮಂತ್ರಿಗಳನ್ನು ಭೇಟಿಮಾಡಿ ಕೇಳಿಕೊಂಡಿದ್ದೇನೆ. ಇವತ್ತೂ ಸಹ ಅವರ ಮನೆಗೆ ಹೋಗಿ ಕೇಳಿಕೊಂಡಿದ್ದೇನೆ. ದಯವಿಟ್ಟು 25 ಕಿ.ಮೀ re-coat ವ್ಯವಸ್ಥೆ ಮಾಡಿದರೆ ತಾಲ್ಲೂಕಿನ ಜನರಿಗೆ ಏನೋ ಶಾಸಕರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎನ್ನುವ ಭಾವನೆ ಬರುತ್ತದೆಯೇ ಹೊರತ್ತದೆ. ಹಿಂದೆ ನಾವು

ಲೋಕಸಭಾ ಸದಸ್ಯರಾಗಿದ್ದೆವು. ಆದರೆ ಹೊಸದಾಗಿ ಶಾಸಕರಾದ ಮೇಲೆ ಜನರು ನಿರೀಕ್ಷೆ ಮಾಡುವುದು ಸಹಜ. ಮಾನ್ಯ ಮಂತ್ರಿಯವರು ಅದನ್ನು ಪರಿಹಾರ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಎರಡನೆಯದಾಗಿ, ನನ್ನ ಸರ್ಕಾರ ಅಭಿವೃದ್ಧಿ ಪಥದಲ್ಲಿ ಮುನ್ನೆಡೆಯುತ್ತಿದೆ ಎಂದು ಹೇಳಿದ್ದಾರೆ. ನೂರು ದಿನಗಳಿಗೊಮ್ಮೆ ಸಂಪೂರ್ಣ ಕರ್ನಾಟಕದ ಜನತೆಯ ಪ್ರಗತಿಯ ವರದಿಯನ್ನು ಒಪ್ಪಿಸುವುದಾಗಿ ಸರ್ಕಾರ ಹೇಳಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು 30% ಅಭಿವೃದ್ಧಿ ಕೆಲಸ ಕರ್ನಾಟಕದಲ್ಲಾಗಿದೆ ಇನ್ನೂ ಬಾಕಿಯಿದೆ ಎನ್ನುವ ವಿಚಾರವನ್ನು paperನಲ್ಲಿ ಹೇಳಿದ್ದಾರೆ. ನಾನು ಹೇಳುವುದು ಇಷ್ಟೆ, ಇನ್ನು ಉಳಿದಿರುವ ಎರಡು ತಿಂಗಳ ಅವಧಿಯಲ್ಲಿ ಉಳಿದಿರುವ 70% ಪ್ರಗತಿಯನ್ನು ಸಾಧಿಸುವುದಕ್ಕೆ ಯಾವ ಕಾರಣಕ್ಕೂ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯು ಸುಳ್ಳಾಗುತ್ತದೆ ಎನ್ನುವ ಅಂಶವನ್ನು ಹೇಳುತ್ತಾ, ಇದಕ್ಕೆಲ್ಲಾ ಕಾರಣವೇನೆಂದರೆ 15 ದಿವಸಗಳ ಹಿಂದೆ ಅವರೇ paperನಲ್ಲಿ ಹೇಳಿದ್ದಾರೆ, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ 30% ಕೆಲಸವಾಗಿದೆ. ಇನ್ನು 70% ಕೆಲಸ ಬಾಕಿ ಇದೆ ಎಂದು. ಇನ್ನು ಉಳಿದಿರುವುದು ಫೆಬ್ರವರಿ ಮತ್ತು ಮಾರ್ಚ್ ತಿಂಗಳು ಈ ಎರಡು ತಿಂಗಳಿನಲ್ಲಿ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಹೇಳುತ್ತೇನೆ. ಕಳೆದ ಸಾಲಿನಲ್ಲಿ ರಸಗೊಬ್ಬರದ ಕೊರತೆಯಿಂದ ಗೋಲಿಬಾರ್ ಸಮಸ್ಯೆ ಉದ್ಭವಿಸಿತು. ಸರ್ಕಾರ ಬಂದು ಆರು ತಿಂಗಳಾದರೂ ರಸಗೊಬ್ಬರದ ಸಮಸ್ಯೆಯನ್ನು ಹೇಗೆ ನಿಭಾಯಿಸಬೇಕೆಂದು ಪರಿಹಾರ ಕಂಡುಕೊಳ್ಳಲಿಲ್ಲ. ಏಕೆಂದರೆ, ಮೇ ತಿಂಗಳಿನಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ cautios ಆಗಿ ಇರಬೇಕಾಗಿತ್ತು. ರಸಗೊಬ್ಬರ ಯಾವ್ಯಾವ ಕಂಪನಿಯಿಂದ ಎಷ್ಟೆಷ್ಟು ತರಿಸಿಕೊಳ್ಳುವುದು? Distribution ಹೇಗೆ ಮಾಡುವುದು ಎಂಬ ಬಗ್ಗೆ ಯೋಚನೆ ಮಾಡುವುದು ಸರ್ಕಾರದ ಕರ್ತವ್ಯ. ಅದನ್ನು ಪರಿಪಾಲನೆ ಮಾಡದಿರುವುದರಿಂದ ಹಳ್ಳಿಗಾಡಿನ ಎಲ್ಲಾ ತಾಲ್ಲೂಕುಗಳಲ್ಲಿ ರಸಗೊಬ್ಬರಕ್ಕಾಗಿ ಕ್ಯೂ ನಿಂತು, ಗಲಾಟೆಯಾಯಿತು. ಜೊತೆಗೆ 50 ಕೆ.ಜಿ ಗೊಬ್ಬರಕ್ಕೆ 100 ರಿಂದ 150 ರೂಪಾಯಿ extra ಹಣ ಕೊಟ್ಟು ಖರೀದಿ ಮಾಡಿರುವ ಉದಾಹರಣೆ ಇದೆ. ಇದು ಸರ್ಕಾರದ ವೈಫಲ್ಯವೆಂದು ನಾನು ಹೇಳುವುದಕ್ಕೆ ಇಷ್ಟುಪಡುತ್ತೇನೆ. ಏಕೆಂದರೆ, ಇದನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮೊದಲೇ caution ತೆಗೆದುಕೊಂಡಿದ್ದರೆ ರಸಗೊಬ್ಬರದ ಕೊರತೆಯನ್ನು ಪರಿಹಾರ ಮಾಡಬಹುದಾಗಿತ್ತು. ಈಗ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ತೀವ್ರ ಆರ್ಥಿಕ ಬಿಕ್ಕಟ್ಟು

ನಮ್ಮ ದೇಶದಲ್ಲಿಯೂ ಸಹ ಇದೆ. ನಮ್ಮ ರಾಜ್ಯದಲ್ಲಿಯೂ ಸಹ ಆರ್ಥಿಕ ಬಿಕ್ಕಟ್ಟು ಇದೆ. ಕರ್ನಾಟಕ ಆರ್ಥಿಕ ಬಲವರ್ಧನೆ ತಂತ್ರಜ್ಞಾನ ಕ್ಷೇತ್ರ, ಸಿದ್ಧ ಉಡುಪು ಕೈಗಾರಿಕಾ ಉತ್ಪನ್ನ, ಮೋಟಾರು ವಾಹನಗಳ ಮಾರಾಟ, ಇವೆಲ್ಲಾ ಸ್ಥಿರಾಸ್ತಿಗಳು. registration ಬಗ್ಗೆ ಹೇಳಿದರು. ನಿನ್ನೆ ಮಂತ್ರಿಗಳು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು ಏನೆಂದರೆ, ಎಲ್ಲಾ ಇಲಾಖೆಗಳ ಆದಾಯ ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಜಾಸ್ತಿ ಇದೆ ಎಂದು ಹೇಳುವುದು ಅವರೇ. ವರದಿಯಲ್ಲಿ ಆದಾಯ ಕಡಿಮೆಯಿದೆ ಎಂದು ಹೇಳುವುದು ಅವರೇ. ಇದು ಯಾವ ನ್ಯಾಯ? 2007-08ನೇ ಸಾಲಿನ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಬಂದಿರುವ ಆದಾಯಕ್ಕಿಂತ 2008-09ನೇ ಸಾಲಿನಲ್ಲಿ ಹೆಚ್ಚಿನ ಆದಾಯ ಬಂದಿದೆ ಎಂದು ಹೇಳಿ, ಅವರೇ ಆರ್ಥಿಕ ಹಿಂಜರಿತ ಎಲ್ಲಾ ಇಲಾಖೆಗಳಿಂದ ಆಗಿದೆ ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಹಣದ ಕೊರತೆ ಆಗುತ್ತದೆ ಎನ್ನುವುದರಲ್ಲಿ ಎರಡು ಅನುಮಾನವಿಲ್ಲ. ಸುಮಾರು 4-5 ಕೋಟಿ ರೂಪಾಯಿ ಹಣದ ಕೊರತೆಯಾಗುತ್ತದೆ. ಸರ್ಕಾರ ಈ ಕೊರತೆಯನ್ನು ಹೇಗೆ ನಿಭಾಯಿಸುತ್ತದೆ ಎಂದು ನಮಗೆ ಅರ್ಥವಾಗುತ್ತಿಲ್ಲ. ಹಣದ ಕೊರತೆಯಾದ ಮೇಲೆ ಅಭಿವೃದ್ಧಿ ಕೆಲಸವನ್ನು ಕಡಿಮೆ ಮಾಡುತ್ತಾರೆಯೇ ಹೊರತು, ಬೇರೆ ಯಾವುದೇ ರೀತಿಯ remedy ಅದರಲ್ಲಿ ಇಲ್ಲ. ಈಗಾಗಲೇ SEPನಲ್ಲಿ ಬಂತೋ ವಿಶೇಷ ಘಟಕ ಪರಿಶಿಷ್ಟ ವರ್ಗದವರಿಗೆ ಕೇವಲ 300 ಕೋಟಿ ರೂಪಾಯಿ ಹಣವನ್ನು ವಿತರಣೆ ಮಾಡಿ 2 ಸಾವಿರ ಕೋಟಿ ರೂಪಾಯಿ ಬಾಕಿಯಿದೆ. ಅದೇ ರೀತಿ ಇನ್ನೆರೆಡು ತಿಂಗಳಿನಲ್ಲಿ ಸುಧಾರಣೆ ಮಾಡಿ, ಕರ್ನಾಟಕ ರಾಜ್ಯದ 56 ಸಾವಿರ ಕೋಟಿ ಬಜೆಟ್‌ನಲ್ಲಿ 26 ಸಾವಿರ ಕೋಟಿ ಯೋಜನೆಯ ಹಣದಲ್ಲಿ 4 ರಿಂದ 5 ಸಾವಿರ ಹಣ ಕೊರತೆಯಾಗುವುದರಲ್ಲಿ ಸಂಶಯವಿಲ್ಲ. ರೈತರನ್ನು ವಿದೇಶ ಅಧ್ಯಯನಕ್ಕೆ ಪ್ರವಾಸ ಕಳುಹಿಸುವ ಕಾರ್ಯಕ್ರಮಕ್ಕೆ ಈಗಾಗಲೇ ಎರಡು ತಂಡಗಳನ್ನು ಚೀನಾಕ್ಕೆ ಕಳುಹಿಸುವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಚೀನಾಕ್ಕೆ ಹೋದವರು ಯಾರು? ಯಾವ್ಯಾವ ಪಕ್ಷದಲ್ಲಿ ಹೋಗಿದ್ದಾರೆ? ಯಾರು ಹೋಗಿದ್ದಾರೆ ಎನ್ನುವುದು ಮುಖ್ಯ. ಚೀನಾ ಪ್ರವಾಸಕ್ಕೆ ಕಳುಹಿಸಿರುವವರು ಬಹುತೇಕ ಕಾಂಗ್ರೆಸ್ಸಿನ ಶಾಸಕರು recommend ಮಾಡಿರುವುದಾಗಲಿ, ದಳದ ಶಾಸಕರು recommend ಮಾಡಿರುವುದಾಗಲಿ ಯಾರನ್ನೂ ಕಳುಹಿಸುತ್ತಿಲ್ಲ. ಎಲ್ಲಾ ಅವರೇ ತಯಾರು ಮಾಡಿ ಅವರವರ ಕಾರ್ಯಕರ್ತರನ್ನು ಕಳುಹಿಸುತ್ತಿದ್ದಾರೆ ಹೊರತು, ಕಾಂಗ್ರೆಸ್ ಅಥವಾ ದಳದ ಕಾರ್ಯಕರ್ತರು ಯಾರು ಹೋಗುತ್ತಿಲ್ಲ. ಎಲ್ಲಾ ಬಿ.ಜೆ.ಪಿ ಕಾರ್ಯಕರ್ತರೇ ಚೀನಾಕ್ಕೆ

ಹೋಗುತ್ತಿದ್ದಾರೆ. ಈ ವಿಷಯ ಪತ್ರಿಕೆಯಲ್ಲಿಯೂ ಸಹ ಬಂದಿದೆ. ಇದರಲ್ಲಿ ನನ್ನ ಒಬ್ಬನ ಹೇಳಿಕೆ ಅಲ್ಲ. ಆದುದರಿಂದ ಈ ವಿಚಾರವನ್ನು ಗಣನೀಯವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ರಸಗೊಬ್ಬರದ ಮೇಲೆ ಸಾವಯವ ಕೃಷಿಗೆ ಪ್ರೋತ್ಸಾಹ ನೀಡುವ ಬಗ್ಗೆ ಹೇಳಿದ್ದಾರೆ. ಸಾವಯವ ಗೊಬ್ಬರದಲ್ಲಿ ರೈತರು agriculture ನ್ನು ಮಾಡಬೇಕು. ಹೋರದೇಶಗಳಲ್ಲಿ ಸಾವಯವ ಗೊಬ್ಬರದಿಂದ ಬೆಳೆದಿರುವಂತಹ agriculture cropsಗೆ ಬೇಡಿಕೆ ಜಾಸ್ತಿ ಇದೆ ಅಂದ ಮೇಲೆ ಸರ್ಕಾರದವರು ಸಾವಯವ ಗೊಬ್ಬರಕ್ಕೆ 50% ಸಬ್ಸಿಡಿ ದರದಲ್ಲಿ ಗೊಬ್ಬರವನ್ನು ಕೊಟ್ಟರೆ, ರೈತರು purchase ಮಾಡುವುದಕ್ಕೆ ಸುಲಭವಾಗುತ್ತದೆ. ಮುಂದಿನ ದಿನಗಳಲ್ಲಿ ಸಾವಯವ ಗೊಬ್ಬರಕ್ಕೆ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ ಎಂದ ಮೇಲೆ 50% ಸಬ್ಸಿಡಿ ದರದಲ್ಲಿ ಗೊಬ್ಬರವನ್ನು ಸರ್ಕಾರ society ಮುಖಾಂತರ ಮಾರಾಟವನ್ನು ಮಾಡಿದರೆ ರೈತರಿಗೆ ತುಂಬಾ ಉಪಯೋಗವಾಗುತ್ತದೆ. ಸಾವಯವ ಗೊಬ್ಬರವನ್ನು ಉಪಯೋಗಿಸುವಲ್ಲಿ ಪ್ರತಿಯೊಬ್ಬರು ಹೊಂದಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ದೇಶದಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದಿಸಿದ ನಮ್ಮ ರಾಜ್ಯದಲ್ಲಿ ಪ್ರಸಕ್ತ ವಿದ್ಯುತ್ ಅಭಾವ ತೀವ್ರವಾಗಿರುವುದು ದುರಾದೃಷ್ಟಕರ. ಯೋಜನೆ ಮತ್ತು ವಿದ್ಯುಚ್ಛಕ್ತಿ ಪೂರೈಕೆಗಾಗಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಈ ಸಾರಿ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಹಳ್ಳಿಗಾಡು ಹಾಗೂ ಪಟ್ಟಣ ಪ್ರದೇಶಗಳಲ್ಲಿ ವಿದ್ಯುತ್ ಕೊರತೆ ತೀವ್ರವಾಗಿದೆ. ಹಳ್ಳಿಗಾಡಿನಲ್ಲಿ ವಿದ್ಯುತ್ ಪ್ರತಿ ದಿವಸ 6 ಗಂಟೆಯಿಂದ 7 ಗಂಟೆಯವರೆಗೆ ಹೆಚ್ಚು ಇದ್ದರೆ. ಮೂರು ಗಂಟೆ 3 ಫೇಸ್ ಇದ್ದರೆ ಹೆಚ್ಚು.

3 ಫೇಸ್‌ನಲ್ಲಿ ಮೂರು ಗಂಟೆಗಳ ಕಾಲ ವಿದ್ಯುತ್ ಇದ್ದರೆ ಹೆಚ್ಚು. ಹಾಗಾಗಿ, ಹಳ್ಳಿಗಾಡುಗಳಲ್ಲಿ ಕುಡಿಯುವುದಕ್ಕೆ mini water ಪ್ರಾರಂಭಿಸಿ ಟ್ಯಾಂಕ್‌ನಿಂದ ನೀರನ್ನು ಭರ್ತಿ ಮಾಡುವುದರೊಳಗಾಗಿ ಕರೆಂಟ್ ಆಫ್ ಆಗಿ ಹೋಗುತ್ತದೆ. Mini waterನಲ್ಲಿ ಸಿಸ್ಟನ್ ಭರ್ತಿ ಆಗುವುದರೊಳಗೆ ಕರೆಂಟ್ ಹೋಗಿರುತ್ತದೆ! ಹಳ್ಳಿಗಾಡಿನಲ್ಲಿ ಒಂದೂವರೆ ಗಂಟೆ, ಎರಡು ಗಂಟೆಯೂ 3 ಫೇಸ್‌ನಲ್ಲಿ ವಿದ್ಯುತ್ ಇರುವುದಿಲ್ಲ. ಜೊತೆಗೆ, ARWS, NRWS, over head tankಗಳು ಭರ್ತಿಯಾಗುವ ಪ್ರಶ್ನೆಯೇ ಇಲ್ಲ. ಕಾರಣವೇನೆಂದರೆ, ವಿದ್ಯುತ್ ಅಭಾವವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರ ಇದನ್ನು ಮೊದಲೇ ಆಲೋಚನೆ ಮಾಡಬೇಕಿತ್ತು. ಮೇ ತಿಂಗಳಿನಲ್ಲಿ ಅಧಿಕಾರಕ್ಕೆ ಬಂದಿದ್ದರು. ಜೂನ್, ಜುಲೈ ತಿಂಗಳಿನಲ್ಲಿ ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಿ ಕರ್ನಾಟಕಕ್ಕೆ ಹೆಚ್ಚಿಗೆ ವಿದ್ಯುತ್ ಖರೀದಿಸಿದ್ದರೆ ಈ ಸಮಸ್ಯೆಯನ್ನು ಬಗೆಹರಿಸಬಹುದಿತ್ತು. ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ

ಅಭಾವ ಕಳೆದ 20 ವರ್ಷಗಳಿಂದಲೂ ಇದೆ. ಎಲ್ಲಾ ಸರ್ಕಾರಗಳೂ 5,000 MW, 8,000 MW ವಿದ್ಯುತ್ ಸ್ಟೇಶನ್‌ಗಳನ್ನು ಶಂಕುಸ್ಥಾಪನೆ ಮಾಡುತ್ತಲೇ ಇವೆ. ಆದರೆ, ಯಾವುದೂ ಆಗುತ್ತಿಲ್ಲ.

ಈ ಸಂದರ್ಭದಲ್ಲಿ ನಾನು ಹೇಳಬಯಸುವುದೇನೆಂದರೆ, ಇಲ್ಲಿಯೂ ಈ ಸರ್ಕಾರ 5,000 MWಗೆ ಎಷ್ಟೇ ಆಲೋಚನೆ ಮಾಡಿಕೊಂಡರೂ ವಿದ್ಯುತ್ ಪರಿಹಾರ ಆಗಬೇಕೆಂದಿದ್ದರೆ ಹಿಂದಿನ ಸರ್ಕಾರಗಳೆಲ್ಲವೂ ನಮ್ಮ ಕಾಂಗ್ರೆಸ್ ಸರ್ಕಾರ ಇರಬಹುದು, ಜನತಾ ದಳ ಸರ್ಕಾರ ಇರಬಹುದು. ಅವರು ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸಿ ಕರ್ನಾಟಕದಲ್ಲಿ ವಿದ್ಯುತ್ ಅಭಾವವಾಗದಂತೆ ಹಳ್ಳಿಗಾಡುಗಳಲ್ಲಿ ದಿವಸಕ್ಕೆ 3 ಫೇಸ್‌ನಲ್ಲಿ ಕನಿಷ್ಠ 10 ಗಂಟೆ ಕರೆಂಟ್ ಕೊಡುವ ವ್ಯವಸ್ಥೆಯನ್ನು ಹಿಂದಿನ ಸರ್ಕಾರಗಳೆಲ್ಲವೂ ಮಾಡಿಕೊಂಡು ಬಂದಿದ್ದವು. ಆದರೆ, ಈಗಿನ ಸರ್ಕಾರದಲ್ಲಿ ಅದು ಆಗುತ್ತಿಲ್ಲ. ಕಾರಣವೇನೆಂದರೆ, ಸಮಸ್ಯೆ ಉದ್ಭವಿಸಿದಾಗ ಮಾತ್ರ ಸರ್ಕಾರ ಚಿಂತನೆ ಮಾಡುತ್ತಿದೆ. ಮೊದಲೇ ಆಲೋಚನೆ ಮಾಡಿದ್ದರೆ ಸರ್ಕಾರ ಇದನ್ನು ನಿವಾರಿಸಬಹುದಿತ್ತು. ಈಗ ಎಲ್ಲಾ ರಾಜ್ಯಗಳಲ್ಲೂ ಕರೆಂಟ್ ಕೊಡಿ ಎಂದು ಕೇಳುವುದಕ್ಕೆ ಹೋದರೆ ಅವರು ಆಗಲೇ ಬೇರೆ ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಂಡಿರುತ್ತಾರೆ. ಎಲ್ಲಾ ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಂಡ ನಂತರ ನಮ್ಮ ರಾಜ್ಯಕ್ಕೆ ವಿದ್ಯುತ್ ಕೊಡುವ ಪ್ರಶ್ನೆಯೇ ಇಲ್ಲ.

ಹಿಂದೆ ಬೇರೆ ಸರ್ಕಾರಗಳು ಹಳ್ಳಿಗಾಡಿನಲ್ಲಿ 16 ಗಂಟೆಗಳಷ್ಟು ಕರೆಂಟ್ ಕೊಡುವ, 3 ಫೇಸ್‌ನಲ್ಲಿ ಕನಿಷ್ಠ 10 ಗಂಟೆಗಳಷ್ಟು ವಿದ್ಯುತ್ ಕೊಡುವ ವ್ಯವಸ್ಥೆ ಮಾಡಿದ್ದವು. ಸರ್ಕಾರದ ಲೋಪದೋಷದಿಂದಾಗಿ ಇವತ್ತು ಕರೆಂಟ್ ಅಭಾವವಾಗಿದೆಯೆಂದು ಹೇಳಬಯಸುತ್ತೇನೆ. ಜೊತೆಗೆ, ಖವಿದ್ಯುತ್ ಕೊರತೆಯ ಪರಿಸ್ಥಿತಿಯಲ್ಲೂ ಆಶ್ವಾಸನೆ ನೀಡಿದಂತೆ 10 ಹೆಚ್.ಪಿ.ಯ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನಾಂಕ 1.8.2008ರಿಂದ ಉಚಿತ ವಿದ್ಯುತ್ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, 10 ಹೆಚ್.ಪಿ.ವರೆಗೆ ಉಚಿತ ವಿದ್ಯುತ್ ಸೌಲಭ್ಯ ಈಗಲ್ಲ ಬಂದಿರುವುದು, 2000 ಇಸವಿಯಿಂದಲೇ 10 ಹೆಚ್.ಪಿ.ವರೆಗೆ ಯಾರೂ ಹಣ ಕಟ್ಟುತ್ತಿಲ್ಲ. ಈಗ ಇದು ಹೊಸ ಐಟಂ ಎಂದು ಸರ್ಕಾರ ಹೇಳಿದೆ. ನಮ್ಮ ಸರ್ಕಾರ ಇದ್ದಾಗ 10 ಹೆಚ್.ಪಿ.ವರೆಗಿನ ಐ.ಪಿ.ಸೆಟ್‌ಗೆ ಏನು ಉಚಿತ ವಿದ್ಯುತ್ ಕೊಡುತ್ತಾರೆ, ಯಾವ ದರವನ್ನೂ ಕಟ್ಟುವುದೂ ಬೇಡ. 10 ಹೆಚ್.ಪಿ.ಗೂ ಸಹ ಹಣ ಕಟ್ಟುವುದೂ ಬೇಡವೆಂದು ಹೇಳಿದೆ.

ಹಿಂದಿನ ಸರ್ಕಾರಗಳು 2000ನೇ ಇಸವಿಯಲ್ಲಿ ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ 10 ಹೆಚ್.ಪಿ.ವರೆಗೆ ಉಚಿತ ವಿದ್ಯುತ್ ಯೋಜನೆ ಜಾರಿಗೆ ತಂದಿದೆ. ಇದುವರೆಗೂ ಯಾರೂ ಹಣ ಕಟ್ಟಿಲ್ಲ. ಅದನ್ನಾದರೂ ಸಹ ಕೂಲಂಕಷವಾಗಿ ಈಗ ಎಲ್ಲಾ ಕಡೆ 10 ಹೆಚ್.ಪಿ.ವರೆಗೆ ಹಿಂದೆ ಎಷ್ಟು ಜನರು ಹಣ ಕಟ್ಟಿದ್ದರು ಎನ್ನುವುದನ್ನೆಲ್ಲಾ ಲೆಕ್ಕ ಹಾಕಿದ್ದಾರೆ. ಹಾಗಾಗಿ, ನಾನು ಇಲ್ಲಿ ಹೇಳುವುದಿಷ್ಟೆ. ಹೊಸದಾಗಿ ಏನು ಅವರು ಆಶ್ವಾಸನೆಗಳನ್ನು ಕೊಟ್ಟಿದ್ದರು, 10 ಹೆಚ್.ಪಿ.ವರೆಗೆ ಉಚಿತ ವಿದ್ಯುತ್ ಎನ್ನುವ ಒಂದು ಅಂಶವನ್ನು ಏನು ಹೇಳಿದ್ದಾರೆ, ಈ ಯೋಜನೆ ಮೊದಲಿನಿಂದಲೂ ಸಹ ಇತ್ತು. ಇದನ್ನು ಹೊಸದಾಗಿ ಸೇರಿಸುವಂಥಾದ್ದಲ್ಲ ಎನ್ನುವ ವಿಚಾರ ಹೇಳುತ್ತೇನೆ.

"ಈ ವರ್ಷ ಸರ್ವ ಶಿಕ್ಷಣ ಅಭಿಯಾನಕ್ಕೆ ಇಲ್ಲಿಯವರೆಗೆ ಈಗಾಗಲೇ ರೂ.505 ಕೋಟಿ ಖರ್ಚು ಮಾಡಲಾಗಿದೆ. ಈ ಯೋಜನೆಗೆ 35 ಪ್ರತಿಶತ ಹೆಚ್ಚುವರಿ ಅನುದಾನ ನೀಡಲಾಗುತ್ತಿದೆ. 6,500 ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ ಕೊಡಲಾಗಿದೆ." ಮಾನ್ಯ ಅಧ್ಯಕ್ಷರೆ, ನನಗೆ ಮಾಹಿತಿ ಇರುವಂತೆ ಒಂದು ತಾಲ್ಲೂಕಿಗೆ 5 ಶಾಲಾ ಕೊಠಡಿಗಳು ಅಥವಾ 8 ಶಾಲಾ ಕೊಠಡಿಗಳನ್ನು ಕೊಟ್ಟಿದ್ದಾರೆ. ಅದು ಬಿಟ್ಟರೆ ನನಗೆ ಬಂದಿರುವ ಮಾಹಿತಿ ಪ್ರಕಾರ ಅದಕ್ಕಿಂತಲೂ ಹೆಚ್ಚಿಗೆ ಯಾವ ಕ್ಷೇತ್ರದಲ್ಲೂ ಕೊಟ್ಟಿಲ್ಲ. ಇಲ್ಲಿ 6,500 ಶಾಲಾ ಕೊಠಡಿಗಳೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ಬಹುತೇಕ ಸರಿಯಲ್ಲವೆನ್ನುವ ಅಂಶವನ್ನು ಇಲ್ಲಿ ನಾನು ಹೇಳಬಯಸುತ್ತೇನೆ. ಕಾರಣವೇನೆಂದರೆ, ಪ್ರತಿಯೊಂದು ಕ್ಷೇತ್ರಕ್ಕೂ ಕನಿಷ್ಠ 50 ಶಾಲಾ ಕೊಠಡಿಗಳ ಅವಶ್ಯಕತೆ ಇದೆ. ಇಷ್ಟು ಸಂಖ್ಯೆಯಲ್ಲಿ ಶಾಲಾ ಕೊಠಡಿಗಳನ್ನು ಕೊಡಲಿಲ್ಲವೆಂದರೆ, ಏನಾಗುತ್ತದೆಂದರೆ, ಹಿಂದೆ ಕೊಟ್ಟಿರುವ ಹಳೆಯ ಶಾಲಾ ಕೊಠಡಿಗಳ ದುರಸ್ತಿಗೇ ಹಣ ಖರ್ಚಾಗುತ್ತದೆ, ಆಗ ಸಮಸ್ಯೆ ಪ್ರಾರಂಭವಾಗುತ್ತದೆ. ಒಂದು ಕ್ಷೇತ್ರಕ್ಕೆ ಕನಿಷ್ಠ 50 ಶಾಲಾ ಕೊಠಡಿಗಳ ಅವಶ್ಯಕತೆ ಇದೆ. ಅದನ್ನು ಸರ್ಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಒಂದು ಒಳ್ಳೆಯ ಅಂಶವನ್ನು ಇಲ್ಲಿ ಹೇಳಿದ್ದಾರೆ. "ರಾಜ್ಯದ ಪ್ರತಿಯೊಂದು ಬಡ ಕುಟುಂಬಕ್ಕೂ ಉತ್ಕೃಷ್ಟ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ವಿಮೆಯ ಮೂಲಕ ಗರಿಷ್ಠ ರೂ.1.5 ಲಕ್ಷವರೆಗಿನ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆಯನ್ನು ತಯಾರಿಸಲಾಗುತ್ತಿದೆ." ಇದನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿದರೆ ಬಡ ಕುಟುಂಬಗಳಿಗೆ ತಗಲುವ ಆರೋಗ್ಯ ವೆಚ್ಚ, ಆಪರೇಶನ್ ವೆಚ್ಚವೆಂದು ಒಂದೂವರೆ ಲಕ್ಷದವರೆಗೆ ಹಣ ಭರಿಸಿದರೆ ತುಂಬಾ ಉಪಕಾರವಾಗುವ ಯೋಜನೆ ಇದಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಲೋಕೋಪಯೋಗಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗೆ ಮತ್ತು ನಿರ್ವಹಣೆಗೆ ರೂ.1,000 ಕೋಟಿಗೂ ಹೆಚ್ಚು ಹಣವನ್ನು ವಿನಿಯೋಗಿಸಲಾಗಿದೆ ಎಂದು ಹೇಳಿದ್ದಾರೆ. ನಾನು ಮೊದಲೇ ಹೇಳಿದೆ. ರೂ.1,000 ಕೋಟಿ ಹೆಚ್ಚುವರಿ ಹಣವನ್ನು ಲೋಕೋಪಯೋಗಿ ಇಲಾಖೆಗೆ. . .ನನ್ನ ಕ್ಷೇತ್ರಕ್ಕೆ ಗುಂಡಿ ಮುಚ್ಚುವ ಒಂದು ಕಾರ್ಯಕ್ರಮ ಬಿಟ್ಟರೆ 12ನೇ ಯೋಜನೆಯಲ್ಲಿ ಗುಂಡಿ ಮುಚ್ಚುವುದು ಬಿಟ್ಟರೆ ಬೇರೆ ಯಾವುದೇ ಕಾರ್ಯಕ್ರಮವಿಲ್ಲ. ನಾವು ಏನು ಕನಸು ಕಂಡಿದ್ದೆವು ಎಂದರೆ, ಶಾಸಕರಾದ ನಂತರ ಹಾಗೆ ಕೆಲಸ ಮಾಡಬಹುದು, ಹೀಗೆ ಕೆಲಸ ಮಾಡಬಹುದು. ಪ್ರತಿ ತಿಂಗಳು ಎರಡು ಉದ್ಘಾಟನೆ, ಎರಡು ಶಂಕು ಸ್ಥಾಪನೆ ಎಂದು ಪತ್ರಿಕೆಯವರ ಬಳಿ ಹೇಳಿಕೊಂಡಿದ್ದೆವು. ಆದರೆ, ಉದ್ಘಾಟನೆಯೂ ಇಲ್ಲ, ಶಂಕುಸ್ಥಾಪನೆಯೂ ಇಲ್ಲ. ಹಾಗಾಗಿ, ಏನಾಗಿದೆಯೆಂದರೆ, ಪತ್ರಿಕೆಯವರು ನ್ಯೂಸ್‌ಗಾಗಿ ಕರೆದಾಗ, ಎಲ್ಲಿ ಸಾರ್, 6 ತಿಂಗಳಾಯಿತು, 7 ತಿಂಗಳಾಯಿತು, ಒಂದು ಶಂಕುಸ್ಥಾಪನೆಯೂ ಇಲ್ಲ, ಒಂದು ಉದ್ಘಾಟನೆಯೂ ಇಲ್ಲವೆಂದು ಹೇಳುತ್ತಾರೆ. ಇದು ಏಕೆ ಹೀಗಾಗುತ್ತದೆಂದರೆ, ಸರ್ಕಾರಕ್ಕೆ ಸ್ವಲ್ಪಮಟ್ಟಿಗೆ ಆಸಕ್ತಿ ಇರಬಹುದು. ಆದರೆ, speed up ಮಾಡುವುದರಲ್ಲಿ ಹಿಂದೆ ಬಿದ್ದಿದೆ ಎಂದರೆ ತಪ್ಪಾಗಲಾರದು. ಜೊತೆಗೆ, ಇದರಲ್ಲಿ ತಾರತಮ್ಯ ನಡೆದಿದೆ. ಈ ಹಣ ವಿನಿಯೋಗಿಸುವುದರಲ್ಲಿ, ಹಣವನ್ನು ಕ್ಷೇತ್ರಕ್ಕೆ ಕೊಡುವುದರಲ್ಲಿ ಅವರವರ ಪಾರ್ಟಿಯ ಶಾಸಕರುಗಳಿಗೆ ಜಾಸ್ತಿ ಹಣ ವಿನಿಯೋಗಿಸಿದ್ದಾರೆ.

ಮೊನ್ನೆ ನಮ್ಮ ಸ್ನೇಹಿತರಾದ ಸಿ.ಟಿ.ರವಿಯವರು ಚಿಕ್ಕಮಗಳೂರು ಕ್ಷೇತ್ರದಲ್ಲಿ ಸಿಕ್ಕಿದ್ದರು. ನನಗೆ 16 ಕೋಟಿ ಬಂದಿದೆ, ನಿಮಗೆ ಎಷ್ಟು ಬಂದಿದೆ ರುದ್ರೇಶ್‌ಗೌಡರೆ ಎಂದರು. ನನಗೇನೂ ಬಂದಿಲ್ಲ. ನನಗೆ ಒಂದು ಕಿಲೋಮೀಟರ್‌ನಷ್ಟು ಟಾರು ರಸ್ತೆಯನ್ನೂ ಕೊಟ್ಟಿಲ್ಲವೆಂದರು. ಅವರು ಈಗ ಸದನದಲ್ಲಿ ಇಲ್ಲವೆಂದು ಕಾಣುತ್ತದೆ. ಇದ್ದಿದ್ದರೆ, ಕ್ಲಾರಿಫೈ ಮಾಡುತ್ತಿದ್ದೆ. ಅವರಿಗೆ 16 ಕೋಟಿ ರೂ. ನನ್ನದೂ ಅಷ್ಟೇ ಕ್ಷೇತ್ರ. ನಾನೂ ಚುನಾಯಿತ ಪ್ರತಿನಿಧಿ, ಅವರೂ ಚುನಾಯಿತ ಪ್ರತಿನಿಧಿ. ಅವರೂ ಜನರಿಂದ ಚುನಾಯಿತರಾಗಿದ್ದಾರೆ, ನಾನೂ ಜನರಿಂದಲೇ ಚುನಾಯಿತವಾಗಿರುವುದು. ಹಾಗಾಗಿ, ಇಂತಹ ತಾರತಮ್ಯ ನಡೆಯುತ್ತಿದೆ. ತಾರತಮ್ಯ ಈ ಮಟ್ಟಕ್ಕೆ ಇರಬಾರದು. ಏಕೆಂದರೆ, ಕ್ಷೇತ್ರದಲ್ಲಿ ಅಭಿವೃದ್ಧಿ ಈ ತರಹವಾದರೆ, ಅಭಿವೃದ್ಧಿ ಹೊಂದಲು ಸಾಧ್ಯವಾಗುವುದಿಲ್ಲ. ಕ್ಷೇತ್ರವು ಸರ್ವತೋಮುಖ ಅಭಿವೃದ್ಧಿ ಹೊಂದಬೇಕಾದರೆ ಎಲ್ಲಾ ತರಹದಲ್ಲೂ ಎಲ್ಲಾ ಇಲಾಖೆಗಳಲ್ಲೂ ಪ್ರಗತಿ ಕಂಡರೆ ಮಾತ್ರ ಅಭಿವೃದ್ಧಿ

ಹೊಂದುತ್ತದೆಯೇ ಹೊರತು, ನಮ್ಮ ನಮ್ಮ ಪಕ್ಷಕ್ಕೆ ಹಣ ಕೊಡೋಣ, ಬೇರೆ ಪಕ್ಷದವರಿಗೆ ಹಣ ಕೊಡುವುದು ಬೇಡ.

ಈ ಪದ್ಧತಿಯನ್ನು, ತಾರತಮ್ಯವನ್ನು ಇಟ್ಟುಕೊಂಡು ಬಂದರೆ ಯಾವ ಕ್ಷೇತ್ರವೂ ಅಭಿವೃದ್ಧಿಯಾಗುವುದಿಲ್ಲ. ಕರ್ನಾಟಕ ಇದ್ದಂತೆಯೇ ಇರುತ್ತದೆ. ಪ್ರಗತಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ನೀರಾವರಿಯ ಬಗ್ಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಾಸನ ಜಿಲ್ಲೆಯ ಬೇಲೂರು ಕ್ಷೇತ್ರದಲ್ಲಿ ಯಗಚಿ ಡ್ಯಾಂ ಇದೆ. ಈ ಡ್ಯಾಂನ ಹಿನ್ನೀರಿನಿಂದ ಚಿಕ್ಕಮಗಳೂರಿಗೆ ಕುಡಿಯುವ ನೀರನ್ನು ತೆಗೆದುಕೊಂಡ ಹೋಗುತಿದ್ದಾರೆ. ಈ ಡ್ಯಾಂನಿಂದ ಬೇಲೂರು ತಾಲ್ಲೂಕಿನ ಸುಮಾರು 9 ಸಾವಿರ ಎಕರೆ ಮುಳುಗಡೆಯಾಗಿತ್ತು. ಆದರೆ ನನ್ನ ಕ್ಷೇತ್ರಕ್ಕೆ ಎರಡು ಸಾವಿರ ಎಕರೆಗೂ ನೀರು ಇಲ್ಲ. ಎಲ್ಲವನ್ನು ಕೊಟ್ಟಿದ್ದು ಬೇರೆ ತಾಲ್ಲೂಕುಗಳಿಗೆ. ನಮ್ಮಲ್ಲಿ ಮಾದೇಹಳ್ಳಿ, ಹಳೇಬೀಡು ಮತ್ತು ಜಾವಗಲ್ ಈ ಮೂರು ಹೋಬಳಿಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಜಾಸ್ತಿ ಇದೆ. ನೀರನ್ನು ಪಾತ್ರೆಯಲ್ಲಿ ಬಿಸಿ ಮಾಡಿದರೆ ತಳದಲ್ಲಿ ಒಂದೂವರೆ ಇಂಚು ಫ್ಲೋರೈಡ್ ಉಳಿದುಕೊಳ್ಳುತ್ತದೆ. ಈ ರೀತಿ ಸಮಸ್ಯೆ ಅಲ್ಲಿದೆ. ಈ ಹಿಂದೆ ಕೆ.ಸಿ. ರೆಡ್ಡಿಯವರು ವರದಿ ಕೊಟ್ಟಿದ್ದು..

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಅಧಿವೇಶನ ಕರೆಯುವುದಕ್ಕೆ ನಾವೆಲ್ಲರು ಒಪ್ಪಿಕೊಂಡಿಸದ್ದು ಏಕೆಂದರೆ ಇಲ್ಲಿ ಅನೇಕ ಸಮಸ್ಯೆಗಳು ಇರುತ್ತದೆ. ಅದಕ್ಕೆ ಸ್ಪಂದಿಸಬೇಕು. ಶಾಸಕರು ಏನು ವಿಚಾರಗಳನ್ನು ಈ ಸದನದಲ್ಲಿ ಮಂಡಿಸುತ್ತಾರೋ ಅದಕ್ಕೆ ಸಂಬಂಧಪಟ್ಟ ಸಚಿವರು, ಮುಖ್ಯಮಂತ್ರಿಗಳು ಬರೆದುಕೊಂಡು ಏನಾದರು ಪರಿಹಾರ ಕಂಡು ಹಿಡಿಯುತ್ತಾರೆಂದು ಮಾತನಾಡುತ್ತಾರೆ. ಈಗ ರುದ್ರೇಶ್‌ಗೌಡರು ಮಾತನಾಡುತ್ತ ಪಿ.ಡಬ್ಲ್ಯೂ.ಡಿ. ಬಗ್ಗೆ ಮಾತನಾಡಿದರು. ಆದರೆ ಸಚಿವರು ಹೊರಟುಹೋದರು. ನೀರಾವರಿಯ ಬಗ್ಗೆ ಈಗ ಮಾತನಾಡುತ್ತಿದ್ದಾರೆ, ಆದರೆ ನೀರಾವರಿ ಸಚಿವರು ಇಲ್ಲಿ ಇಲ್ಲ. ಹೀಗಾದರೆ ನಾವು ಏಕೆ ಇಲ್ಲಿ ಮಾತನಾಡಬೇಕು? ಯಾರಿಗೋಸ್ಕರ ಮಾತನಾಡಬೇಕು? ಇಲ್ಲಿ exclusively ಆಗಿ ಸಭೆ ಸೇರಿದ್ದೇವೆ. ಇಂಥ ಕಡೆ ಸಹ ಒಂದು ನಾಲ್ಕು ಗಂಟೆ ಕುಳಿತು ಕೇಳಲು ಆಗುವುದಿಲ್ಲವೆಂದರೆ ಹೇಗೆ? ಇಷ್ಟೊಂದು ದಪ್ಪ ಚರ್ಮಮಾಡಿಕೊಂಡು ನಡೆದರೆ ಒಳ್ಳೆಯದಾಗುವುದಿಲ್ಲ.

ಶ್ರೀ ಆರ್. ಅಶೋಕ್ :- ಮಾನ್ಯ ಸದಸ್ಯರು ಏನು ಮಾತನಾಡಿದ್ದಾರೆ ಅದನ್ನು ಮಾನ್ಯ ಲೋಕೋಪಯೋಗಿ ಸಚಿವರು ನೋಟ್ ಮಾಡಿಕೊಂಡು ನಾಳೆ ಈ ಸದನದಲ್ಲಿ ಏನು ಲೋಕೋಪಯೋಗಿ ಇಲಾಖೆಯ ಬಗ್ಗೆ ಪ್ರಶ್ನೆಯನ್ನು ಎತ್ತಿದ್ದಾರೆ ಅದಕ್ಕೆ ಉತ್ತರ ಕೊಡುತ್ತೇನೆಂದು ರುದ್ರೇಶ್‌ಗೌಡರಿಗೆ ಒಂದು ಪತ್ರವನ್ನು ಬರೆದುಕೊಟ್ಟು ಹೋಗಿದ್ದಾರೆ. ಮತ್ತೆ ಅವರು ರಸಗೊಬ್ಬರದ ಬಗ್ಗೆ, ರೈತರ ಚೈನಾ ಪ್ರವಾಸದ ಬಗ್ಗೆ, ವಿದ್ಯುತ್ ಅಭಾವದ ಬಗ್ಗೆ ಏನೇನು ಹೇಳಿದ್ದಾರೆ ಅದನ್ನು ನಾನು ಬರೆದುಕೊಂಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಒಬ್ಬರೇ ಬರೆದುಕೊಳ್ಳಿ!

ಶ್ರೀ ಆರ್. ಅಶೋಕ್ :- ಬಹಳಷ್ಟು ಜನ ನಾವೂ ಕುಳಿತಿದ್ದೇವೆ. ಅವರು ಏನು ಹೇಳುತ್ತಿದ್ದಾರೊ ಅದನ್ನು ಬರೆದುಕೊಳ್ಳುತ್ತಿದ್ದೇವೆ.

ಉಪಾಧ್ಯಕ್ಷರು :- ಇವತ್ತು ಏನು ಲಿಸ್ಟ್ ಕೊಟ್ಟಿದ್ದಾರೊ ಅದರ ಪ್ರಕಾರ ಇದ್ದಾರೆ.

ಶ್ರೀ ಆರ್. ಅಶೋಕ್ :- ಮಾನ್ಯ ಸದಸ್ಯರುಗಳು ಏನು ಮಾತನಾಡುತ್ತಾರೊ ಅದನ್ನು ನೋಟ್ ಮಾಡಿಕೊಂಡು ಸಂಬಂಧಪಟ್ಟ ಇಲಾಖೆಯವರಿಂದ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಅದಕ್ಕೆ ಸರಿಯಾದ ಉತ್ತರವನ್ನು ಕೊಡಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ತಾವು ಆ ರೀತಿ ಬರೆದುಕೊಳ್ಳುವುದಕ್ಕಿಂತ ಇಲ್ಲಿ ವರದಿಗಾರರು ಸಂಪೂರ್ಣವಾಗಿ ಬರೆದು ಕೊಂಡಿರುವುದೇ ಇರುತ್ತದೆ. ಅದನ್ನೇ ತೆಗೆದುಕೊಂಡು ಕೊಡಿ. ಏಕೆ ಅಷ್ಟು ಕಷ್ಟಪಡುತ್ತೀರಿ?!

ಶ್ರೀ ಕೆ.ಎಸ್. ಈಶ್ವರಪ್ಪ :- ಇಲ್ಲಿ ಹಲವಾರು ಸಚಿವರು ಇದ್ದಾರೆ. ಉಳಿದವರು ಮೇಲ್ಮನೆಯಲ್ಲಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ನಾನು ಮಾತನಾಡಿದಮೇಲೆ ನೀವು ಮಾತನಾಡಿ. ನಮ್ಮ ಮನವಿ ಏನೆಂದರೆ,ಇಲ್ಲಿ ವಿಶೇಷವಾದ ಅಧಿವೇಶನವನ್ನು ಕರೆದಿದ್ದೀರಿ. ಬೇರೆ ಜನರು ಸಹ ಬಂದು ಇಲ್ಲಿ ಏನು ಮಾತನಾಡುತ್ತಾರೆ, ಸರ್ಕಾರದವರು ಏನು ಉತ್ತರ ಕೊಡುತ್ತಾರೆ, ಯಾರ್ಯಾರು ಸಚಿವರುಗಳು ಬಂದಿದ್ದಾರೆ ಎಂಬುದನ್ನು ನೋಡುತ್ತಾರೆ. ಆ ದೃಷ್ಟಿಯಿಂದಲಾದರು ನಾವೆಲ್ಲರು ಇಲ್ಲಿ ಇರೋಣ, ಅಧಿವೇಶನ ಇರುವುದೇ ಐದಾರು ದಿವಸ. ಅಷ್ಟೂ ಪುರುಸೊತ್ತು ಇಲ್ಲವೆಂದರೆ ಕಷ್ಟವಾಗುತ್ತದೆಯೆಂದು ನಾನು ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ನೀವು ಎಲ್ಲವನ್ನು ಹೇಳಿ ಎಂದು ನೀವೇ ಹೇಳುತ್ತೀರಿ. ಆದರೆ, ಇಲ್ಲಿ ಮಂತ್ರಿಗಳೆ ಇಲ್ಲವೆಂದರೆ ರಾಜ್ಯಪಾಲರ ಭಾಷಣೆ ಮೇಲೆ ನಾವು ಏನು ಹೇಳಿದರು ಪ್ರಯೋಜನವೇನು? ಅದಕ್ಕೆ ಅರ್ಥ ಬರುವುದಿಲ್ಲ. ಎಲ್ಲಾ ಸಚಿವರುಗಳು ಕುಳಿತುಕೊಂಡು ಕೇಳಿದರೆ ಸಮಸ್ಯೆ ಅರ್ಥವಾಗುತ್ತದೆ. ನಮ್ಮ ಸಮಸ್ಯೆಗಳನ್ನು ಹೇಳಿದಾಗ ಅವರು ಆಲಿಸಿದರೆ ತಾನೆ ಅವರು ಅದಕ್ಕೆ ಉತ್ತರ ಕೊಡಲು ಆಗುವುದು. ಯರೋ ಬರೆದುಕೊಂಡು ಯಾರಿಗೋ ಕೊಟ್ಟು ಯೋರೋ ಉತ್ತರವನ್ನು ಹೇಳುವುದು ವಿರೋಧ ಪಕ್ಷದ ನಾಯಕರು ಹೇಳಿದಂತೆ ಒಳ್ಳೆಯದಲ್ಲ

ಶ್ರೀ ರುದ್ರೇಗೌಡ :- ನಾನು ಬೇಲೂರಿನ ಯಗಚಿ ಜಲಾಶಯ ಯೋಜನೆಯ ಬಗ್ಗೆ ತಮಗೆ ಹೇಳುತ್ತಿದ್ದೆ. ಈ ಯೋಜನೆಯಿಂದ ಬೇರೆ ತಾಲ್ಲೂಕಿನವರು ನೀರನ್ನು ತೆಗೆದುಕೊಂಡಿದ್ದಾರೆಯೆ ಹೊರತು ನಮ್ಮ ಬೇಲೂರು ತಾಲ್ಲೂಕಿಗೆ ಯಾವುದೇ ನೀರು ಹರಿದಿಲ್ಲ. ಅದರಿಂದ ಉಪಯೋಗ ಆಗಿಲ್ಲ. ಇದರಿಂದ ಬೇಲೂರು ತಾಲ್ಲೂಕಿನ 9 ಸಾವಿರ ಎಕರೆ ಮುಳುಗಡೆಯಾಯಿತೇ ಹೊರತು ಸ್ವಲ್ಪವೂ ನೀರನ್ನು ಕೊಟ್ಟಿಲ್ಲ. ಕುಡಿಯುವುದಕ್ಕೆ ನೀರು ಕೊಡಿ ಎಂದರೆ ಅದನ್ನು ಸಹ ಮಾಡುತ್ತಿಲ್ಲ. ಇದರ ಬಗ್ಗೆ ಕೆ.ಸಿ. ರೆಡ್ಡಿಯವರು ಒಂದು ವರದಿಯನ್ನು ಸಹ ಕೊಟ್ಟಿದ್ದಾರೆ. ಯಗಚಿಹೊಳೆ ಮೂರು ಟಿ.ಎಂ.ಸಿ. ನೀರು. ಅದು ಭರ್ತಿಯಾಗಿ ಡ್ಯಾಂನಿಂದ ಹೊರಕ್ಕೆ ಹೋಗುವ ನೀರನ್ನು ಲಿಫ್ಟ್ ಇರಿಗೇಷನ್ ಮೂಲಕ 12 ಕೆರೆಗಳನ್ನು ಭರ್ತಿಮಾಡಿದರೆ ಈ ಮೂರು ಹೋಬಳಿಯಲ್ಲಿ ಏನು ಫ್ಲೋರೈಡ್ ಅಂಶದ ನೀರು ಇರುವ ಸಮಸ್ಯೆ ಇದೆ ಅದನ್ನು ಬಗೆಹರಿಸಬಹುದು ಎಂದು ಕೆ.ಸಿ. ರೆಡ್ಡಿಯವರು ವರದಿಯನ್ನು ಕೊಟ್ಟಿದ್ದಾರೆ. ಈ ಹಿಂದಿನ ಸರ್ಕಾರ ಅದಕ್ಕೆ ಮಂಜೂರಾತಿಯನ್ನು ಮಾಡಿ ಹತ್ತು ಲಕ್ಷ ರೂಪಾಯಿ ನಿಗದಿ ಮಾಡಿ ಸ್ಕೆಚ್‌ನ್ನು ಸಹ ಮಾಡಿ ಎಂದು ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಯವರು ವಿರೋಧ ಪಕ್ಷದ ನಾಯಕರಾಗಿದ್ದ ಸಂದರ್ಭದಲ್ಲಿ ಹಳೇಬೀಡಿಗೆ ಬಂದು ಪಾದಯಾತ್ರೆಯನ್ನು ಮಾಡಿ ಈ ಪ್ರದೇಶದಲ್ಲಿ ಫ್ಲೋರೈಡ್ ಅಂಶದ ನೀರು ಇದೆ, ಆದ್ದರಿಂದ ಹಳೇಬೀಡು, ಮಾದೇಹಳ್ಳಿ ಮತ್ತು ಜಾವಗಲ್ ಈ ಮೂರು ಹೋಬಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡೇ ಮಾಡುತ್ತೇವೆಂದು ಹೇಳಿ ಹೋಗಿದ್ದರು. ಆದರೆ ಇದುವರೆಗು ಕೆಲಸವಾಗಿಲ್ಲ. ಈ ಹಿಂದಿನ ಸರ್ಕಾರ ಮಂಜೂರಾತಿಯನ್ನು ಮಾಡಿದೆ. ಹತ್ತು ಲಕ್ಷ ರೂಪಾಯಿ ಹಣವನ್ನು ಸಹ ಇಟ್ಟಿದೆ. ಆದರೆ ಕೆಲಸ ಮಾತ್ರ ಅಲ್ಲಿಗೆ ನಿಂತುಹೋಗಿದೆ. ಹಿಂದೆ ಹೊಯ್ಸಳರ ಕಾಲದಲ್ಲಿ ಇದ್ದಂಥ

ಚಾನಲ್ ಅದು. ಕೇವಲ ಮೂರು ಕಿಲೋಮೀಟರ್‌ವರೆಗೆ ನೀರನ್ನು ಮೋಟಾರ್‌ನಿಂದ ಲಿಫ್ಟ್ ಮಾಡಿದರೆ ಸಾಕು, ನೂರಾರು ವರ್ಷ ಇತಿಹಾಸ ಇರುವ ಹೋಯ್ಸಳರ ಕಾಲಕ ಚಾನಲ್ ಮೂಲಕ ನೀರು ಕೆರೆಗಳಿಗೆ ಹರಿದುಹೋಗುತ್ತದೆ. ಆದ್ದರಿಂದ ಕೇವಲ ಮೂರು ಕಿಲೋಮೀಟರ್‌ವರೆಗೆ ಮೋಟಾರನ್ನು ಇಟ್ಟು ನೀರನ್ನು ಲಿಫ್ಟ್ ಮಾಡಬೇಕಾಗಿದೆ. 2 ಲಕ್ಷ ಹೊಸ ಮನೆಗಳನ್ನು ಕಟ್ಟುತ್ತೇವೆ,ಫಲಾನುಭವಿಗಳನ್ನು ಆಯ್ಕೆಮಾಡುತ್ತೇವೆಂದು ಹೇಳಿದ್ದಾರೆ. ನಮ್ಮಲ್ಲಿ ಇದುವರೆಗೆ ಬಂದಿರುವುದು 35 ಮನೆಗಳು. ಇಂದಿರಾ ಆವಾಜ್‌ನಲ್ಲಿ 15 ಮನೆಗಳು, ಒಟ್ಟು 50 ಮನೆಗಳು ಬಂದಿದೆ. ಹೀಗಾದರೆ 2 ಲಕ್ಷ ಮನೆ ಕಟ್ಟುವುದು ಎಲ್ಲಿಂದ. ಒಂದೊಂದು ತಾಲ್ಲೂಕಿಗೆ 50 ಮನೆ ಗಳನ್ನು ಕೊಟ್ಟರೆ ಉಳಿದಿರುವುದು ಎರಡೇ ತಿಂಗಳು, ಇನ್ನು ಯಾವ ಸ್ಕೀಮ್ ಇದೆ, ಕೇವಲ ಕಾಗದದಲ್ಲಿ, ಪುಸ್ತಕದಲ್ಲಿ ಪ್ರಿಂಟ್ ಮಾಡಿದ ತಕ್ಷಣ ಗುರಿ ಮುಟ್ಟಲು ಆಗುವುದಿಲ್ಲ. ಗುರಿ ಮುಟ್ಟಲೆ ಬೇಕು ಎಂಬ ಚಲ, ಹಠ, ಉದ್ದೇಶ, ಆಲೋಚನೆ, ಇಚ್ಚಾಶಕ್ತಿ ಇದ್ದರೆ ಎಲ್ಲ ಕೆಲಸವನ್ನು ಮಾಡಬಹುದೇ ಹೊರತು ಇಲ್ಲದಿದ್ದರೆ ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನನ್ನ ಬೇಲೂರು ತಾಲ್ಲೂಕಿನಲ್ಲಿ 1 ಲಕ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿದ್ದಾರೆ. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ರಸ್ತೆಗಳನ್ನು ಮತ್ತು drainage ಗಳನ್ನು ಮಾಡಲಿಕ್ಕೆ ಸಮಾಜ ಕಲ್ಯಾಣ ಇಲಾಖೆಯವರು ಹಣವನ್ನು ಕೊಡಬೇಕು. ಹಿಂದೆ ಬೇಲೂರಿನಲ್ಲಿ ಮೂರು ಬಾರಿ ಶಾಸಕರಾಗಿದ್ದ ಮಾನ್ಯ ಕುಮಾರಸ್ವಾಮಿಯವರು ಇದಕ್ಕಾಗಿ ಹಣವನ್ನು ತಂದಿದ್ದಾರೆ. ಆದರೆ ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ವೊನ್ನೆ ಈ ಬಗ್ಗೆ ಕೇಳಿದರೆ, ಆ ಹಣವನ್ನು ಕೊಡಲಿಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ತಾರತಮ್ಯ ಏಕೆ? ಬೇರೆ ಪಕ್ಷದವರು ಶಾಸಕರಾದ ತಕ್ಷಣ, ತಾರತಮ್ಯ ಮಾಡುವುದು ಏಕೆ? ಕೇಂದ್ರ ಸರ್ಕಾರದಿಂದ 4 ಕೋಟಿ ರೂ.ಗಳು ಬಂದಿದೆ. ಸಮಾಜ ಕಲ್ಯಾಣ ಇಲಾಖೆ Commissioner ಹತ್ತಿರ ಹೋದರೆ ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಕೇಳಿ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳನ್ನು ಕೇಳಿದರೆ, ನಾವು ಹಣ ಕೊಡುವುದಕ್ಕಾಗುವುದಿಲ್ಲ ಎನ್ನುವ ವಿಚಾರವನ್ನು ಹೇಳುತ್ತಾರೆ. ಈ ತಾರತಮ್ಯ ಬೇಡ. ಸಾರ್, ನನಗೆ ಅಷ್ಟೂ ಹಣ ಬೇಡ, 30-40 ಲಕ್ಷ ರೂ.ಗಳನ್ನಾದರೂ ಕೊಡಿ ಎಂದು ನಾನು ಅವರನ್ನು ಕೇಳಿದರೂ ಕೊಡಲಿಲ್ಲ. ನಮ್ಮಲ್ಲಿ 1 ಲಕ್ಷಕ್ಕೂ ಹೆಚ್ಚು population ಇದೆ, 300 ಕಾಲೋನಿಗಳಿವೆ. ಈ 300 ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಕನಿಷ್ಟ 40 ಲಕ್ಷ ರೂ.ಗಳನ್ನಾದರೂ ಕೊಟ್ಟರೆ,

8 ಹಳ್ಳಿಗಳಲ್ಲಿ ಜಲ್ಲಿ ರಸ್ತೆ ಮಾಡಬಹುದು. ಆ ಹಣದಿಂದ ಡಾಂಬರೀಕರಣ ಮಾಡಲಿಕ್ಕಾಗುವುದಿಲ್ಲ. ಹಣ ಮಂಜೂರು ಮಾಡುವಂತೆ ನಾವು ಕೇಳಿಕೊಂಡಿದ್ದೇವೆ. ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಇಲ್ಲೇ ಇದ್ದಾರೆ. ಸ್ವಲ್ಪ ಅವರ ನಿಲುವನ್ನು ಅವರು ಬದಲಾಯಿಸಿಕೊಳ್ಳಬೇಕಾಗುತ್ತದೆ. 'All are equal' ಎನ್ನುವುದನ್ನು ಅವರು ಸ್ವಲ್ಪವಾದರೂ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಎಲ್ಲರೂ ಸಹ ಸರಿ ಸಮಾನರು ಎಂಬ ಭಾವನೆ ಅವರಿಗೆ ಇರಬೇಕು. ಎಲ್ಲಾ ಶಾಸಕರೂ ಸಹ ಕಷ್ಟಪಟ್ಟು ಗೆದ್ದು ಬಂದಿದ್ದಾರೆ. ಶಾಸಕರಿಗೆ ಕೆಲಸ ಮಾಡಬೇಕೆನ್ನುವ ಹುಮ್ಮಸ್ಸಿದೆ, ಶಾಸಕರಿಗೆ ಆಸಕ್ತಿ ಇದೆ, ಕ್ಷೇತ್ರದ ಅಭಿವೃದ್ಧಿ ಪಡಿಸಬೇಕೆಂಬ ಹುಮ್ಮಸ್ಸಿದೆ, ಅದಕ್ಕೆ ನಾವು ಪ್ರೋತ್ಸಾಹ ಮಾಡಬೇಕೆನ್ನುವ ಭಾವನೆ ಮಾನ್ಯ ಮಂತ್ರಿಗಳಲ್ಲಿ ಇರಬೇಕೇ ಹೊರತು, ಅದನ್ನು ಬಿಟ್ಟು, ಏಕಾಏಕಿ ಬೇರೆ ಪಕ್ಷದವರು ಎನ್ನುವಂತಹ ಏಕೈಕ ಉದ್ದೇಶದಿಂದ ಅವರು ಹಣವನ್ನು ಕೊಡಲಿಕ್ಕಾಗುವುದಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಬೇಲೂರು ತಾಲ್ಲೂಕಿನಲ್ಲಿ ಶಾಸಕರಾದ ನಾವು ಹಳ್ಳಿಗಳಿಗೆ ಹೋದಾಗ ಬೋರ್‌ವೆಲ್‌ಗಳನ್ನು ಕೊರೆಸುವಂತೆ ಕೇಳುತ್ತಿದ್ದಾರೆ. ಸುಮಾರು ಹಳ್ಳಿಗಳಲ್ಲಿ ಹೊಸದಾಗಿ 20-25 ಮನೆಗಳನ್ನು ಬೇರೆ ಬೇರೆ ಜಾಗದಲ್ಲಿ ಕಟ್ಟಿಕೊಂಡಿರುತ್ತಾರೆ. ಶಾಸಕರುಗಳು ಹೋದಾಗ ಸಹಜವಾಗಿ ಅವರು ನಮ್ಮಲ್ಲಿ 20 ಮನೆಗಳು ಇದೆ, ಬೋರ್‌ವೆಲ್ ಕೊರೆಸಿ ಕೊಡಿಕಿ ಎಂದು ಕೇಳುತ್ತಾರೆ. ಬೋರ್‌ವೆಲ್ ಕೊರೆಸುವುದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ನಾವು ಈ ಬಗ್ಗೆ CS ಅವರನ್ನು ಕೇಳಿದರೆ, ರುದ್ರೇಶ್‌ಗೌಡರೇ, ಇದು ಜಿಲ್ಲಾ ಪಂಚಾಯಿತಿ ಸದಸ್ಯರ ವ್ಯಾಪ್ತಿಗೆ ಬರುತ್ತದೆ, ನಾನೇನು ಮಾಡಲಿ? ಎಂದು ಹೇಳುತ್ತಾರೆ. ಮಾನ್ಯ Rural Development Minister ಅನ್ನು ನಾವು ಕೇಳಿಕೊಳ್ಳುವುದು ಇಷ್ಟೇ. ಶಾಸಕರುಗಳು ಹೇಳಿದ ಕಡೆ ಬೋರ್‌ವೆಲ್ ಕೊರೆಸುವ ಬಗ್ಗೆ ಇರುವ ಸಮಸ್ಯೆಯನ್ನು ಅವರು ಇತ್ಯರ್ಥ ಮಾಡಬೇಕು. ಶಾಸಕನಾದ ನಾನು ಬೇಲೂರು ತಾಲ್ಲೂಕಿನಲ್ಲೇ ಇದ್ದರೂ ಸಹ, ಹಳ್ಳಿಗಳಿಗೆ ಹೋದಾಗ, ಹಳ್ಳಿಗಳಲ್ಲಿ 20-25 ಮನೆಗಳನ್ನು ನಾವು ಪ್ರತ್ಯೇಕವಾಗಿ ಕಟ್ಟಿಕೊಂಡಿದ್ದೇವೆ, ನಮಗೊಂದು ಬೋರ್‌ವೆಲ್ ಕೊರೆಸಿಕೊಡಿ ಎಂದು ಕೇಳಿದಾಗ, ಶಾಸಕರುಗಳು ವರ್ಷಕ್ಕೆ ಇಂತಿಷ್ಟು ಬೋರ್‌ವೆಲ್‌ಗಳನ್ನು ಕೊರೆಸಬಹುದು ಎಂಬುದು ಇದ್ದರೆ, ನಾವು ಅವರಿಗೆ ಆಶ್ವಾಸನೆಯನ್ನು ಕೊಟ್ಟು ಬರಬಹುದು. ಇಲ್ಲದಿದ್ದರೆ ನಮ್ಮ ಪರಿಸ್ಥಿತಿ ಕಷ್ಟವಾಗುತ್ತದೆ. ಶಾಸಕರ ನಿಧಿಯಿಂದಲೇ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕಾಗುವುದಿಲ್ಲ. ಶಾಸಕರ ನಿಧಿಯ ಹಣದಿಂದಲೇ

ಸಮುದಾಯ ಭವನವನ್ನು ಕಟ್ಟುತ್ತೇನೆ, ರಸ್ತೆಗಳನ್ನು ನಿರ್ಮಾಣ ಮಾಡುತ್ತೇನೆ, ಡಾಂಬರೀಕರಣ ಮಾಡುತ್ತೇನೆ, ಕೆರೆಗಳ ಏರಿ ಕಟ್ಟುತ್ತೇನೆ, ಏರಿ ಒಡೆದು ಹೋಗಿರುವುದನ್ನು ರಿಪೇರಿ ಮಾಡಿಸುತ್ತೇನೆ, ಶಾಲಾ-ಕೊಠಡಿಗಳನ್ನು ರಿಪೇರಿ ಮಾಡಿಸುತ್ತೇನೆ, ಅಂಗನವಾಡಿ ರಿಪೇರಿ ಮಾಡಿಸುತ್ತೇನೆ ಎಂದರೆ ಆಗುವುದಿಲ್ಲ. ಈ ಎಲ್ಲಾ ಕೆಲಸಗಳನ್ನು ಶಾಸಕರ ನಿಧಿಯ 1 ಕೋಟಿ ರೂ.ಗಳಿಂದಲೇ ಮಾಡಿಸಲು ಸಾಧ್ಯವಾಗುವುದಿಲ್ಲ. ಶಾಸಕರುಗಳಿಗೆ ಬೋರ್‌ವೆಲ್‌ಗಳನ್ನು ಕೊರೆಸುವ ಬಗ್ಗೆ ಇರುವ ಸಮಸ್ಯೆಗಳ ಸನ್ಮಾನ್ಯ Rural Development Ministerರವರು ಚಿಂತನೆ ಮಾಡಿ, ಅದನ್ನು ಅವರು ಬಗೆಹರಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೂ ಹಲವಾರು ಅಂಶಗಳನ್ನು ಹೇಳಿದ್ದಾರೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕಜನಸ್ಪಂದನಕಿ ಕಾರ್ಯಕ್ರಮದಲ್ಲಿ 65% achievement ಆಗಿದೆ ಎಂದು ಹೇಳಿದ್ದಾರೆ. ಸದರಿ ಕಾರ್ಯಕ್ರಮದಲ್ಲಿ ಏನೇನು ಅರ್ಜಿಗಳು ಬಂದವೋ, ಅದರಲ್ಲಿ 65% ಸಮಸ್ಯೆಗಳನ್ನು ನಾವು ಬಗೆಹರಿಸಿದ್ದೇವೆಂದು ಸರ್ಕಾರ ಹೇಳಿದೆ. ಈ ಮಾಹಿತಿ ಸರಿಯಿಲ್ಲ. Practically ಎಲ್ಲಾ Saturdayಗಳಲ್ಲೂ ನಾನೇ ಹೋಗಿ ಅಧ್ಯಕ್ಷತೆ ವಹಿಸಿ, ಅರ್ಜಿಗಳನ್ನು receive ಮಾಡಿರುವ ಅನುಭವದಿಂದ ಹೇಳುತ್ತಿದ್ದೇನೆ. 5,50,000 ಅರ್ಜಿಗಳಲ್ಲಿ 3,50,000 ಅರ್ಜಿಗಳನ್ನು ವಿಲೇ ಮಾಡಲಾಗಿದೆ ಸರ್ಕಾರ ಹೇಳಿದೆ. ಯಾವ ಕಾರಣಕ್ಕೂ ಕೂಡ ಅದು ಆಗಿಲ್ಲ. 25% ಅರ್ಜಿಗಳನ್ನು ವಿಲೇವಾರಿ ಮಾಡಿರಬಹುದು. ಸ್ವೀಕರಿಸಿದಂತಹ ಅರ್ಜಿಗಳಲ್ಲಿ ಸಂಧ್ಯಾ ಸುರಕ್ಷಾ ಯೋಜನೆ ನಿವೃತ್ತಿ ವೇತನ, ಅಂಗವಿಕಲರ ವಿಶ್ರಾಂತಿ ವೇತನ, ಅಥವಾ ಬೇರೆ widow pension ಮಂಜೂರಾತಿ ಕುರಿತ ಅರ್ಜಿಗಳನ್ನು ಬಗೆಹರಿಸಬಹುದೇ ಹೊರತು, ಖಾತೆ ಬದಲಾವಣೆ ಮಾಡುವುದು ಮುಂತಾದ ಸಮಸ್ಯೆಗಳಿರುವ ಅರ್ಜಿಗಳನ್ನು immediately ವಿಲೇ ಮಾಡಲಿಕ್ಕಾಗುವುದಿಲ್ಲ. ಕೇಳಿದವರಿಗೆಲ್ಲಾ ಮನೆಗಳನ್ನು ಕೊಡಲಿಕ್ಕಾಗುವುದಿಲ್ಲ, ಕೇಳಿದವರಿಗೆಲ್ಲಾ ಸೈಟುಗಳನ್ನು ಕೊಡಲಿಕ್ಕಾಗುವುದಿಲ್ಲ. ನನ್ನ ಪ್ರಕಾರ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕರಿಸಲಾಗುವ ಅರ್ಜಿಗಳಲ್ಲಿ 25% ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಿ, ಅದಕ್ಕೆ positive answer ಅನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇನ್ನುಳಿದ 75% ಅರ್ಜಿಗಳಿಗೆ positive answer ಕೊಡಲಿಕ್ಕಾಗುವುದಿಲ್ಲ. ಯಾವ ಕಾರಣಕ್ಕೂ ಆ ಸಮಸ್ಯೆಗಳು ತಕ್ಷಣ ಬಗೆಹರಿಯುವುದಿಲ್ಲ, ಅವುಗಳು

ಜೀವಂತವಾಗಿಯೇ ಉಳಿಯುತ್ತವೆಂದು ಹೇಳುತ್ತೇನೆ. ನಾನು ಮಾತನಾಡುವ ಸಂದರ್ಭದಲ್ಲಿ ಕೆಲವೊಂದು ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದೇನೆ. ಅವೆಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡುತ್ತೇನೆ. ನಾನು ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ಸಂಜೆ 6.27 ಗಂಟೆಗೆ ಮರುದಿನಕ್ಕೆ ಮುಂದೂಡಲಾಯಿತು.

ಸದನವು ಪುನ: ದಿನಾಂಕ 22ನೇ ಜನವರಿ 2009ರಂದು

ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು]